# ಕರ್ನಾಟಕ ಲಿಫ್ಟ್‌ಗಳ ಅಧಿನಿಯಮ, 1974

(ಕರ್ನಾಟಕ ರಾಜ್ಯಪತ್ರ, ಗುರುವಾರ, ಜನವರಿ 3, 2008, ಭಾಗ – IVಎ, 01 ರಿಂದ 08 ರ ವರೆಗಿನ ಪುಟಗಳಲ್ಲಿ ಪ್ರಕಟಿತವಾಗಿದೆ).

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ

2. ಪರಿಭಾಷೆಗಳು

3. ಲಿಫ್ಟ್‌ನ್ನು ಅಳವಡಿಸಲು ಅನುಮತಿ

4. ಲಿಫ್ಟ್‌ನ್ನು ಬಳಸಲು ಲೈಸೆನ್ಸ್

5. ಅಸ್ತಿತ್ವದಲ್ಲಿರುವ ಲಿಫ್ಟ್‌ಗಳ ಸಂದರ್ಭದಲ್ಲಿ ಲೈಸೆನ್ಸ್‌ಗಾಗಿ ಅರ್ಜಿ

6. ಲೈಸೆನ್ಸ್ ಇಲ್ಲದೆ ಲಿಫ್ಟ್‌ನ್ನು ನಡೆಸಬಾರದು

7. ಲಿಫ್ಟ್ ಸ್ಥಾಪನೆಗೆ ಸೇರ್ಪಡೆಗಳು ಮತ್ತು ಬದಲಾವಣೆಗಳು

8. ಲಿಫ್ಟ್‌ಗಳ ಮತ್ತು ಲಿಫ್ಟ್ ಸ್ಥಾಪನೆಯ ಪರಿಶೀಲನೆಗಾಗಿ ಯಾವುದೇ ಕಟ್ಟಡವನ್ನು ಪ್ರವೇಶಿಸುವ ಹಕ್ಕು

9. ಮಾಲೀಕನು ಪರಿಶೀಲನೆಗಾಗಿ ಸೌಕರ್ಯಗಳನ್ನು ಒದಗಿಸುವುದು

10. ಅಪಘಾತದ ವರದಿ

11. ಸರ್ಕಾರದ ಅಧಿಕಾರಗಳ ಪ್ರತ್ಯಾಯೋಜನೆ

12. ಲಿಫ್ಟ್‌ಗಳ ತಪಾಸಣೆ

13. ಫೀಜುಗಳ ವಸೂಲಿ

14. ನಿಯಮಗಳನ್ನು ರಚಿಸಲು ಅಧಿಕಾರ

15. ದಂಡ

16. ಕಂಪನಿಗಳಿಂದ ಅಪರಾಧಗಳು

17. ಪ್ರಾಸಿಕ್ಯೂಷನ್‌ಗಾಗಿ ಮಂಜೂರಾತಿ

18. ನೋಟೀಸುಗಳ, ಆದೇಶಗಳ ಅಥವಾ ದಸ್ತಾವೇಜುಗಳ ಜಾರಿ

19. ಸದ್ಭಾವನೆಯಿಂದ ಮಾಡಲಾದ ಕೃತ್ಯಗಳಿಗೆ ರಕ್ಷಣೆ

20. ಉಳಿಸುವಿಕೆ

21. ನಿರಸನ

**ಅಧಿಸೂಚನೆ**

**ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ**

**I**

**1974ರ ಅಧಿನಿಯಮ 24.–** ರಾಜ್ಯದಲ್ಲಿ ವಿಶೇಷವಾಗಿ ಬೆಂಗಳೂರು ನಗರದಲ್ಲಿ, ಲಿಫ್ಟ್‌ಗಳಿರುವ ಅನೇಕ ಬಹು ಮಹಡಿ ಕಟ್ಟಡಗಳ ನಿರ್ಮಾಣದ ಪರಿಣಾಮವಾಗಿ, ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಲಿಫ್ಟ್‌ಗಳ ಸಂಖ್ಯೆ ಹೆಚ್ಚುತ್ತಲಿದೆ. ಲಿಫ್ಟ್ ಬಳಸುವವರ ಹಿತದೃಷ್ಟಿಯಲ್ಲಿ ಲಿಫ್ಟ್‌ಗಳ ಕಾರ್ಯಾಚರಣೆಯಲ್ಲಿ ಬಹಳಷ್ಟು ಸಂಖ್ಯೆಯ ಸುರಕ್ಷತಾ ಸಾಧನಗಳು ಮತ್ತು ಸುರಕ್ಷತಾ ಮುನ್ನೆಚ್ಚರಿಕೆಯ ಕ್ರಮಗಳು ಅವಶ್ಯವಾಗಿವೆ. ಆದರೆ ಯುಕ್ತ ಅಧಿಕಾರವಿಲ್ಲದೆ ಅವುಗಳನ್ನು ಬಳಸುವಂತೆ ಒತ್ತಾಯಿಸಲು ಬರುವುದಿಲ್ಲ. 1939ರ ಮುಂಬಯಿ ಲಿಫ್ಟ್ ಅಧಿನಿಯಮವು ಪ್ರಸ್ತುತ ಮುಂಬಯಿ ಪ್ರದೇಶದಲ್ಲಿ ಮಾತ್ರ ಜಾರಿಯಲ್ಲಿದೆ. ಆದ್ದರಿಂದ, ಮುಂಬಯಿ ಅಧಿನಿಯಮದ ರೀತಿಯಲ್ಲಿಯೇ ಒಂದು ಕಾನೂನನ್ನು ರಾಜ್ಯಾದ್ಯಂತ ಅನ್ವಯವಾಗುವಂತೆ ಅಧಿನಿಯಮಿತಿಗೊಳಿಸಲು ಪ್ರಸ್ತಾವಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(22.3.1973 ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ –IV 2ಎ ಸಂ. 280, ಪು 12ರಲ್ಲಿ ಪ್ರಕಟಿಸಲಾಗಿದೆ.)

**II**

**1993ರ ತಿದ್ದುಪಡಿ ಮಾಡುವ ಅಧಿನಿಯಮ 22.–** ಕರ್ನಾಟಕ ಲಿಫ್ಟ್‌ಗಳ ಅಧಿನಿಯಮ, 1974ರ 3ನೇ ಪ್ರಕರಣವು, ಲಿಫ್ಟ್‌ಗಳ ಅಳವಡಿಕೆಗೆ ಅನುಮತಿ ನೀಡಿದ ದಿನಾಂಕದಿಂದ ಆರು ತಿಂಗಳ ಅವಧಿಯನ್ನು ನೀಡುತ್ತದೆ. ವಾಸ್ತವವಾಗಿ ಹಲವಾರು ಪರಿಸ್ಥಿತಿಗಳ ಕಾರಣ ಲಿಫ್ಟ್‌ಗಳ ಅಳವಡಿಕೆಯನ್ನು ನಿಗದಿತ ಅವಧಿಯೊಳಗಾಗಿ ಪೂರ್ಣಗೊಳಿಸಲು ಸಾಧ್ಯವಾಗಿಲ್ಲವೆಂಬುದನ್ನು ಗಮನಿಸಲಾಗಿದೆ. ಆದ್ದರಿಂದ, ಆರು ತಿಂಗಳ ಅವಧಿಯನ್ನು ಹನ್ನೆರಡು ತಿಂಗಳಿಗೆ ವಿಸ್ತರಿಸುವುದು ಮತ್ತು ಅಂಥ ಅನುಮತಿಯನ್ನು ಅಧಿಕೃತ ಅಧಿಕಾರಿಯ ಶಿಫಾರಸಿನ ಮೇಲೆ ಹನ್ನೆರಡು ತಿಂಗಳುಗಳಿಗೂ ಮೀರಿ ವಿಸ್ತರಿಸುವುದು ಅವಶ್ಯವೆಂದು ಸಹ ಪರಿಗಣಿಸಲಾಗಿದೆ.

4ನೇ ಪ್ರಕರಣದ ಅಡಿಯಲ್ಲಿನ ಪ್ರಾರಂಭಿಕ ತಪಾಸಣಾ ಫೀಜನ್ನು ಮತ್ತು 12ನೇ ಪ್ರಕರಣದ ಅಡಿಯಲ್ಲಿನ ವಾರ್ಷಿಕ ತಪಾಸಣಾ ಫೀಜನ್ನು ಸದರಿ ಫೀಜುಗಳನ್ನು ಇಲ್ಲಿಯವರೆಗೆ ಹೆಚ್ಚಿಸದಿರುವುದರಿಂದ ಅವುಗಳನ್ನು ಅನುಕ್ರಮವಾಗಿ ಒಂದು ನೂರು ರೂಪಾಯಿಗಳಿಂದ ಎರಡು ನೂರ ಐವತ್ತು ರೂಪಾಯಿಗಳಿಗೆ ಮತ್ತು ಐವತ್ತು ರೂಪಾಯಿಗಳಿಂದ ಒಂದು ನೂರು ರೂಪಾಯಿಗಳಿಗೆ ಹೆಚ್ಚಿಸುವುದು ಅಗತ್ಯವೆಂದು ಸಹ ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

(1993ರ ವಿ.ಸ. ವಿಧೇಯಕ ಸಂಖ್ಯೆ. 9 ಕಡತ ಸಂ. ಲಾ 8 ಎಲ್‌ಜಿಎನ್ 93 ರಿಂದ ಪಡೆಯಲಾಗಿದೆ.)

**1974ರ ಕರ್ನಾಟಕ ಅಧಿನಿಯಮ ಸಂ. 24**

(1974ರ ಜುಲೈ ಹದಿನೆಂಟರಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟಿತವಾಗಿದೆ)

# ಕರ್ನಾಟಕ ಲಿಫ್ಟ್‌ಗಳ ಅಧಿನಿಯಮ, 1974

(1974ರ ಜುಲೈ ಆರನೇ ದಿನದಂದು ರಾಜ್ಯಪಾಲರ ಸಮ್ಮತಿ ಪಡೆಯಲಾಗಿದೆ)

(1993ರ 22ನೇ ಅಧಿನಿಯಮದಿಂದ ತಿದ್ದುಪಡಿಯಾದಂತೆ)

**ಕರ್ನಾಟಕ ರಾಜ್ಯದಲ್ಲಿ, ಕೆಲವು ವರ್ಗಗಳ ಲಿಫ್ಟ್‌ಗಳ ಮತ್ತು ಅವುಗಳಿಗೆ ಸಂಬಂಧಿಸಿದ ಎಲ್ಲ ಯಂತ್ರೋಪಕರಣಗಳು ಮತ್ತು ಸಲಕರಣೆಗಳ ನಿರ್ಮಾಣ, ನಿರ್ವಹಣೆ ಮತ್ತು ಸುರಕ್ಷಾ ಕಾರ್ಯನಿರ್ವಹಣೆಗೆ ವಿನಿಯಮನವನ್ನು ಉಪಬಂಧಿಸುವ ಒಂದು ಅಧಿನಿಯಮ.**

ಕರ್ನಾಟಕ ರಾಜ್ಯದಲ್ಲಿ ಕೆಲವು ವರ್ಗಗಳ ಲಿಫ್ಟ್‌ಗಳ ಮತ್ತು ಅವುಗಳಿಗೆ ಸಂಬಂಧಿಸಿದ ಎಲ್ಲ ಯಂತ್ರೋಪಕರಣಗಳು ಮತ್ತು ಸಲಕರಣೆಗಳ ನಿರ್ಮಾಣ, ನಿರ್ವಹಣೆ ಮತ್ತು ಸುರಕ್ಷಾ ಕಾರ್ಯನಿರ್ವಹಣೆಗೆ ವಿನಿಯಮನವನ್ನು ಉಪಬಂಧಿಸುವುದು ಯುಕ್ತವಾಗಿರುವುದರಿಂದ;

ಭಾರತ ಗಣರಾಜ್ಯದ ಇಪ್ಪತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:–

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಲಿಫ್ಟ್‌ಗಳ ಅಧಿನಿಯಮ, 1974 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕ][1] ದಂದು ಜಾರಿಗೆ ಬರತಕ್ಕದ್ದು.

1. ಅಧಿನಿಯಮವು ಅಧಿಸೂಚನೆಯ ಮೂಲಕ 01.08.1976 ರಂದು ಜಾರಿಗೆ ಬಂದಿದೆ. ಅಧಿಸೂಚನೆಯ ಪಾಠವು ಅಧಿನಿಯಮದ ಕೊನೆಯ ಪುಟದಲ್ಲಿದೆ.

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಸರ್ಕಾರ" ಎಂದರೆ ರಾಜ್ಯ ಸರ್ಕಾರ ಎಂದು ಅರ್ಥ;

(ಬಿ) "ಲಿಫ್ಟ್‌ಗಳ ತಪಾಸಣಾಧಿಕಾರಿ" ಎಂದರೆ ಸರ್ಕಾರದಿಂದ ಹಾಗೆಂದು ನೇಮಕಗೊಂಡ ಒಬ್ಬ ಅಧಿಕಾರಿ ಎಂದು ಅರ್ಥ;

(ಸಿ) "ಲೈಸೆನ್ಸ್" ಎಂದರೆ 4ನೇ ಪ್ರಕರಣದ ಅಡಿಯಲ್ಲಿ ಮಂಜೂರಾದ ಲೈಸೆನ್ಸ್ ಎಂದು ಅರ್ಥ;

(ಡಿ) "ಲಿಫ್ಟ್" ಎಂದರೆ ಕಾರ್‌ನಿಂದ ಸಜ್ಜುಗೊಳಿಸಲಾದ, ನೇರವಾಗಿ ಮೇಲು– ಕೆಳಗಿನ ದಿಕ್ಕಿನಲ್ಲಿ ಚಲಿಸುವ, ಶಕ್ತಿಯಿಂದ ಕೆಲಸ ಮಾಡುವ, ಪ್ರಯಾಣಿಕರನ್ನು ಅಥವಾ ಸರಕುಗಳನ್ನು ಅಥವಾ ಅವೆರಡನ್ನೂ ಸಾಗಿಸುವಂತೆ ವಿನ್ಯಾಸಗೊಳಿಸಲಾದ ಏರಿಳಿಸುವ ಯಾಂತ್ರಿಕ ವ್ಯವಸ್ಥೆ ಎಂದು ಅರ್ಥ;

(ಇ) "ಲಿಫ್ಟ್ ಕಾರ್" ಎಂದರೆ ಪ್ರಯಾಣಿಕರು ಅಥವಾ ಸರಕುಗಳು ಅಥವಾ ಅವೆರಡನ್ನೂ ಒಯ್ಯುವುದಕ್ಕಾಗಿ ಉಪಯೋಗಿಸುವ ಲಿಫ್ಟಿನ ಚೌಕಾಕಾರದ ಗೂಡು ಅಥವಾ ಚಿಕ್ಕ ಕೋಣೆ ಮತ್ತು ಇದರಲ್ಲಿ ನೆಲಗಟ್ಟು ಅಥವಾ ವೇದಿಕೆ, ಕಾರ್ ಚೌಕಟ್ಟು, ಜೋಲಿ ಮತ್ತು ಸುತ್ತುಗಟ್ಟು ರಚನೆಯನ್ನು ಒಳಗೊಂಡಿರುತ್ತದೆ ಎಂದು ಅರ್ಥ. ಆದರೆ, ಇದರಲ್ಲಿ 1948ರ ಕಾರ್ಖಾನೆಗಳ ಅಧಿನಿಯಮವು ಅನ್ವಯವಾಗುವ ಏರಿಳಿಸುವ ಸಾಧನ ಅಥವಾ ಲಿಫ್ಟ್ ಒಳಗೊಳ್ಳುವುದಿಲ್ಲ;

(ಎಫ್) "ಲಿಫ್ಟ್ ಅಳವಡಿಕೆ"ಯು, ಲಿಫ್ಟ್ ಕಾರ್, ಲಿಫ್ಟ್ ಮಾರ್ಗ, ಲಿಫ್ಟ್ ಮಾರ್ಗದ ಸುತ್ತುಗಟ್ಟು ಮತ್ತು ಲಿಫ್ಟ್ ಚಾಲನಾ ಯಾಂತ್ರಿಕ ವ್ಯವಸ್ಥೆ ಹಾಗೂ ಲಿಫ್ಟ್ ಕಾರ್ಯಾಚರಣೆಗೆ ನೇರವಾಗಿ ಸಂಬಂಧಪಟ್ಟ ಎಲ್ಲ ಹಗ್ಗಗಳು, ಕೇಬಲ್‌ಗಳು, ತಂತಿಗಳು ಮತ್ತು ಸ್ಥಿರ ಯಂತ್ರವನ್ನು ಒಳಗೊಳ್ಳುತ್ತದೆ;

(ಜಿ) "ಲಿಫ್ಟ್ ಮಾರ್ಗ" ಎಂದರೆ ಲಿಫ್ಟ್ ಕಾರ್ ಚಲಿಸಲು ಇರುವ ಶಾಫ್ಟ್;

(ಎಚ್) "ಲಿಫ್ಟ್ ಮಾರ್ಗದ ಸುತ್ತುಗಟ್ಟು" ಇದು ಲಿಫ್ಟ್ ಮಾರ್ಗವನ್ನು ಸುತ್ತುವರಿದ ಅಥವಾ ಆವರಿಸಿದ ಯಾವುದೇ ಖಾಯಂ ಆದ ಸುಭದ್ರವಾದ ರಚನೆಯನ್ನು ಒಳಗೊಳ್ಳುತ್ತದೆ;

(ಐ) "ಅಧಿಸೂಚನೆ" ಎಂದರೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ ಎಂದು ಅರ್ಥ;

(ಜೆ) "ಶಕ್ತಿ" ಎಂದರೆ ಮಾನವರಿಂದ ಅಥವಾ ಪ್ರಾಣಿಗಳಿಂದ ಉತ್ಪಾದಿತವಾಗದ ಯಾವುದೇ ಶಕ್ತಿಯ ರೂಪ ಎಂದು ಅರ್ಥ; ಮತ್ತು

(ಕೆ) "ಗೊತ್ತುಪಡಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ಗೊತ್ತುಪಡಿಸಲಾದುದು ಎಂದು ಅರ್ಥ.

**3. ಲಿಫ್ಟ್‌ನ್ನು ಅಳವಡಿಸಲು ಅನುಮತಿ.–** (1) ಈ ಅಧಿನಿಯಮವು ಪ್ರಾರಂಭವಾದ ನಂತರ ಯಾವ ಸ್ಥಳದಲ್ಲಿ ಅಂಥ ಲಿಫ್ಟ್‌ನ್ನು ಅಳವಡಿಸಲು ಉದ್ದೇಶಿಸಲಾಗಿದೆಯೋ ಆ ಸ್ಥಳದ ಪ್ರತಿಯೊಬ್ಬ ಮಾಲೀಕನು, ಅಂಥ ಲಿಫ್ಟ್‌ನ್ನು ಅಳವಡಿಸಲು ಅನುಮತಿಗಾಗಿ ಈ ಸಂಬಂಧದಲ್ಲಿ ಸರ್ಕಾರವು ಅಧಿಕೃತಗೊಳಿಸುವಂಥ ಅಧಿಕಾರಿಗೆ ಅರ್ಜಿ ಸಲ್ಲಿಸತಕ್ಕದ್ದು. ಅಂಥ ಅರ್ಜಿಯು ಲಿಖಿತದಲ್ಲಿರತಕ್ಕದ್ದು ಮತ್ತು ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು. ಅಂಥ ಅರ್ಜಿಯಲ್ಲಿ,–

(ಎ) ಲಿಫ್ಟ್‌ನ ಮಾದರಿ;

(ಬಿ) ಲಿಫ್ಟ್‌ನ ನಿರ್ಧಾರಿತ ಗರಿಷ್ಠ ವೇಗದ ಪ್ರಮಾಣ;

(ಸಿ) ತಯಾರಕನ ಅಥವಾ ವಿನ್ಯಾಸಕಾರನ ನಿರ್ಧಾರಿತ ತೂಕ – ಸಾಮರ್ಥ್ಯ;

(ಡಿ) ಲಿಫ್ಟ್ ನಿರ್ವಾಹಕನ ಜೊತೆಗೆ ಲಿಫ್ಟ್ ಒಯ್ಯಬಹುದಾದ ಗರಿಷ್ಠ ಸಂಖ್ಯೆಯ ಪ್ರಯಾಣಿಕರು;

(ಇ) ಗರಿಷ್ಠ ಭಾರವನ್ನು ಒಯ್ಯುವ ಲಿಫ್ಟ್‌ಕಾರಿನ ಒಟ್ಟು ತೂಕ;

(ಎಫ್) ಸರಿದೂಗುವ ಭಾರ;

(ಜಿ) ಆಧಾರ ಕೇಬಲ್‌ಗಳ ಸಂಖ್ಯೆ, ವಿವರಣೆ, ತೂಕ ಮತ್ತು ಗಾತ್ರ;

(ಹೆಚ್) ಕಾರ್‌ನ ತೀರ ಕೆಳಭಾಗದಿಂದ ಅದು ಕೆಳ ಅಂತಸ್ತಿನಲ್ಲಿರುವಾಗ ಆ ಗುಂಡಿಯ ಆಳ;

(ಐ) ಗೊತ್ತುಪಡಿಸಬಹುದಾದಂತೆ ತೊಲೆಗಳ ತೂಕ ಮತ್ತು ಗಾತ್ರಗಳೊಂದಿಗೆ ಮೇಲ್ಭಾಗದ ವ್ಯವಸ್ಥೆಯ ರಚನೆಯ ವಿವರಗಳು; ಮತ್ತು

(ಜೆ) ಗೊತ್ತುಪಡಿಸಬಹುದಾದಂಥ ಇತರ ವಿವರಗಳು.

(2) ಅಂಥ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಈ ಪ್ರಕರಣದ ಮೇರೆಗಿನ ಅಧಿಕೃತ ಅಧಿಕಾರಿಯು, ವಿಚಾರಣೆ ಮಾಡಿದ ತರುವಾಯ ಮತ್ತು ಅವಶ್ಯವಿರಬಹುದಾದಂಥ ಮಾಹಿತಿಯನ್ನು ಒದಗಿಸಲು ಅರ್ಜಿದಾರನನ್ನು ಅಗತ್ಯಪಡಿಸಿದ ತರುವಾಯ ಅರ್ಜಿಯನ್ನು ಅವನ ಷರಾದೊಂದಿಗೆ ಸರ್ಕಾರಕ್ಕೆ ಕಳುಹಿಸತಕ್ಕದ್ದು. ಆ ನಂತರ ಸರ್ಕಾರವು, ಅನುಮತಿಯನ್ನು ನೀಡಬಹುದು ಅಥವಾ ನಿರಾಕರಿಸಬಹುದು. ಅಂಥ ಅನುಮತಿಯು, ಅದನ್ನು ನೀಡಿದ ದಿನಾಂಕದಿಂದ [1][ಹನ್ನೆರಡು ತಿಂಗಳ][1] ವರೆಗಿನ ಅವಧಿಗೆ ಮಾತ್ರ ಸಿಂಧುವಾಗಿರತಕ್ಕದ್ದು:

1. 1993ರ ಅಧಿನಿಯಮ 22ರ ಮೂಲಕ 26.05.1993 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

[1][ಪರಂತು, ಅಧಿಕೃತ ಅಧಿಕಾರಿಗೆ ಅರ್ಜಿ ಸಲ್ಲಿಸಿದ ನಂತರ ಮತ್ತು ಅವನ ಶಿಫಾರಸಿನ ಮೇಲೆ, ಸರ್ಕಾರಕ್ಕೆ ಮನದಟ್ಟಾದರೆ ಸದರಿ ಅವಧಿಯನ್ನು ಆರು ತಿಂಗಳುಗಳಿಗೆ ಮೀರದಂತೆ ವಿಸ್ತರಿಸಬಹುದು.][1]

1. 1993ರ ಅಧಿನಿಯಮ 22ರ ಮೂಲಕ 26.05.1993 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

**4. ಲಿಫ್ಟ್‌ನ್ನು ಬಳಸಲು ಲೈಸೆನ್ಸ್.–** (1) 3ನೇ ಪ್ರಕರಣದ ಮೇರೆಗೆ ಲಿಫ್ಟ್‌ನ್ನು ಅಳವಡಿಸಲು ಯಾವ ಸ್ಥಳದ ಮಾಲೀಕನಿಗೆ ಅನುಮತಿಸಲಾಗಿದೆಯೋ ಆ ಸ್ಥಳದ ಪ್ರತಿಯೊಬ್ಬ ಮಾಲೀಕನು, ಅಂಥ ಲಿಫ್ಟ್‌ನ್ನು ಅಳವಡಿಸಿದ ತರುವಾಯ ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಬಹುದಾದಂಥ ಅಧಿಕಾರಿಗೆ ಅಂಥ ಅಳವಡಿಕೆಯನ್ನು ಪೂರ್ಣಗೊಳಿಸಿದ ಬಗ್ಗೆ ಲಿಖಿತದಲ್ಲಿ ಒಂದು ತಿಂಗಳ ಒಳಗೆ, ತಿಳಿವಳಿಕೆ ಪತ್ರವನ್ನು ತಲುಪಿಸತಕ್ಕದ್ದು ಅಥವಾ ಕಳುಹಿಸತಕ್ಕದ್ದು ಅಥವಾ ತಲುಪುವಂತೆ ಅಥವಾ ಕಳುಹಿಸುವಂತೆ ಮಾಡತಕ್ಕದ್ದು ಮತ್ತು ಲಿಫ್ಟ್‌ನ್ನು ನಡೆಸಲು ಲೈಸೆನ್ಸ್‌ಗಾಗಿ ಅವನಿಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು.

(2) (1)ನೇ ಉಪಪ್ರಕರಣದ ಮೇರೆಗೆ ಲೈಸೆನ್ಸ್‌ಗಾಗಿ ಸಲ್ಲಿಸಿದ ಅರ್ಜಿಯು, ಗೊತ್ತುಪಡಿಸಬಹುದಾದಂಥ ನಮೂನೆಯಲ್ಲಿರತಕ್ಕದ್ದು.

(3) ಅಂಥ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಬಹುದಾದಂಥ ಅಧಿಕಾರಿಯು, ಅಗತ್ಯವಿರಬಹುದಾದಂಥ ವಿಚಾರಣೆ ಮಾಡಿದ ತರುವಾಯ, ಅರ್ಜಿಯನ್ನು ಅವನ ಷರಾದೊಂದಿಗೆ ಸರ್ಕಾರಕ್ಕೆ ಕಳುಹಿಸತಕ್ಕದ್ದು. ಆ ನಂತರ ಸರ್ಕಾರವು ಲೈಸೆನ್ಸನ್ನು ನೀಡಬಹುದು ಅಥವಾ ನಿರಾಕರಿಸಬಹುದು.

(4) ಅಂಥ ಅರ್ಜಿಯ ಜೊತೆಗೆ [1][ಇನ್ನೂರ ಐವತ್ತು ರೂಪಾಯಿ][1] ಗಳ ಫೀಜನ್ನು ಸಂದಾಯ ಮಾಡತಕ್ಕದ್ದು.

1. 1993ರ ಅಧಿನಿಯಮ 22ರ ಮೂಲಕ 26.5.1993 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**5. ಅಸ್ತಿತ್ವದಲ್ಲಿರುವ ಲಿಫ್ಟ್‌ಗಳ ಸಂದರ್ಭದಲ್ಲಿ ಲೈಸೆನ್ಸ್‌ಗಾಗಿ ಅರ್ಜಿ.–** (1) 3 ಮತ್ತು 4ನೇ ಪ್ರಕರಣಗಳಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮವು ಪ್ರಾರಂಭವಾಗುವ ದಿನಾಂಕಕ್ಕೆ ಮೊದಲು ಲಿಫ್ಟ್ ಅಳವಡಿಸಿದ್ದ ಸ್ಥಳದ ಪ್ರತಿಯೊಬ್ಬ ಮಾಲೀಕನು, ಅಂಥ ದಿನಾಂಕದಿಂದ ಎರಡು ತಿಂಗಳ ಒಳಗೆ ಅಂಥ ಲಿಫ್ಟ್ ಕಾರ್ಯ ನಿರ್ವಹಿಸಲು ಲೈಸೆನ್ಸ್‌ಗಾಗಿ ಅರ್ಜಿ ಸಲ್ಲಿಸತಕ್ಕದ್ದು.

(2) 4ನೇ ಪ್ರಕರಣದ (2) ರಿಂದ (4)ರ ವರೆಗಿನ ಉಪಪ್ರಕರಣಗಳ ಉಪಬಂಧಗಳು, ಸಾಧ್ಯವಾದಷ್ಟು ಮಟ್ಟಿಗೆ ಅಂಥ ಅರ್ಜಿಗೆ ಅನ್ವಯಿಸತಕ್ಕದ್ದು.

**6. ಲೈಸೆನ್ಸ್ ಇಲ್ಲದೆ ಲಿಫ್ಟ್‌ನ್ನು ನಡೆಸಬಾರದು.–** ಈ ಬಗ್ಗೆ ರಚಿಸಬಹುದಾದ ನಿಯಮಗಳಿಗೆ ಒಳಪಟ್ಟು, ಮತ್ತು ಲಿಫ್ಟ್‌ಗೆ ಸಂಬಂಧಿಸಿದಂತೆ ಮಂಜೂರು ಮಾಡಲಾದ ಲೈಸೆನ್ಸ್‌ನ ನಿಬಂಧನೆಗಳ ಮೇರೆಗೆ ಮತ್ತು ಅವುಗಳ ಅನುಸಾರವಾಗಿ ಹೊರತು ಯಾವುದೇ ಲಿಫ್ಟ್ ಕಾರ್ಯನಿರ್ವಹಿಸತಕ್ಕದ್ದಲ್ಲ:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಂದು ಸ್ಥಾಪಿತವಾದ ಅಂಥ ಲಿಫ್ಟ್‌ಗೆ, ಅಂಥ ದಿನಾಂಕದಿಂದ ಎರಡು ತಿಂಗಳ ಅವಧಿಗೆ ಅಥವಾ 5ನೇ ಪ್ರಕರಣದ ಉಪಬಂಧಗಳ ಅನುಸಾರ ಆ ಅವಧಿಯೊಳಗೆ ಲೈಸೆನ್ಸ್‌ಗಾಗಿ ಅರ್ಜಿ ಸಲ್ಲಿಸಿದ್ದರೆ, ಅಂಥ ಅರ್ಜಿಯನ್ನು ಅಂತಿಮವಾಗಿ ಸದರಿ ಪ್ರಕರಣದ ಮೇರೆಗೆ ಇತ್ಯರ್ಥಗೊಳಿಸುವವರೆಗೆ ಅನ್ವಯಿಸತಕ್ಕದ್ದಲ್ಲ.

**7. ಲಿಫ್ಟ್ ಸ್ಥಾಪನೆಗೆ ಸೇರ್ಪಡೆಗಳು ಮತ್ತು ಬದಲಾವಣೆಗಳು.–** 8ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ಮಾಡಲು ಅಗತ್ಯಪಡಿಸದಂಥವುಗಳನ್ನು ಹೊರತುಪಡಿಸಿ, ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಅಧಿಕಾರಿಯ

ಲಿಖಿತ ಪೂರ್ವ ಅನುಮತಿಯ ಹೊರತು ಯಾವುದೇ ಲಿಫ್ಟ್ ಸ್ಥಾಪನೆಗೆ ಯಾವುದೇ ಸೇರ್ಪಡೆಯನ್ನು ಅಥವಾ ಬದಲಾವಣೆಗಳನ್ನು ಮಾಡತಕ್ಕದ್ದಲ್ಲ.

**8. ಲಿಫ್ಟ್‌ಗಳ ಮತ್ತು ಲಿಫ್ಟ್ ಸ್ಥಾಪನೆಯ ಪರಿಶೀಲನೆಗಾಗಿ ಯಾವುದೇ ಕಟ್ಟಡವನ್ನು ಪ್ರವೇಶಿಸುವ ಹಕ್ಕು.–** (1) ಸರ್ಕಾರವು ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಒಬ್ಬ ಅಧಿಕಾರಿಯು, ಅಧಿಭೋಗದಾರನಿಗೆ ಸೂಕ್ತ ನೋಟೀಸನ್ನು ನೀಡಿದ ತರುವಾಯ, ಯಾವ ಕಟ್ಟಡದಲ್ಲಿ ಲಿಫ್ಟ್‌ನ್ನು ಸ್ಥಾಪಿಸಲಾಗಿದೆಯೋ ಅಥವಾ ಸ್ಥಾಪಿಸಲಾಗುತ್ತಿದೆಯೋ ಅಥವಾ ಯಾವುದರ ಸಂಬಂಧದಲ್ಲಿ ಲೈಸೆನ್ಸ್‌ಗಾಗಿ ಒಂದು ಅರ್ಜಿಯನ್ನು ಸ್ವೀಕರಿಸಲಾಗಿದೆಯೋ ಆ ಯಾವುದೇ ಕಟ್ಟಡವನ್ನು ಲಿಫ್ಟ್‌ನ ಪರಿಶೀಲನೆ ಅಥವಾ ಲಿಫ್ಟ್‌ನ ಸ್ಥಾಪನೆ ಅಥವಾ ಆ ಸ್ಥಳದ ಪರಿಶೀಲನೆಯ ಉದ್ದೇಶಕ್ಕಾಗಿ ಯಾವುದೇ ಸಮಯದಲ್ಲಿ ಪ್ರವೇಶಿಸಬಹುದು.

(2) ಯಾವುದೇ ಕಟ್ಟಡದಲ್ಲಿ, ಯಾವುದೇ ಲಿಫ್ಟ್ ಸುರಕ್ಷಿತವಲ್ಲದ ಸ್ಥಿತಿಯಲ್ಲಿದೆ ಎಂಬುದಾಗಿ ಅಂಥ ಪರಿಶೀಲನೆಯ ನಂತರ ಅಧಿಕಾರಿಯು ಅಭಿಪ್ರಾಯಪಟ್ಟರೆ, ಅವನು, ಕಟ್ಟಡದ ಮಾಲಿಕ ಅಥವಾ 10ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಲಾದ ಅವನ ಏಜೆಂಟನಿಗೆ ಅಂಥ ಲಿಫ್ಟ್‌ಗೆ ಅವನು ಅವಶ್ಯವೆಂದು ಭಾವಿಸಬಹುದಾದ ಅಂಥ ದುರಸ್ತಿ ಅಥವಾ ಬದಲಾವಣೆಗಳನ್ನು ಅದರಲ್ಲಿ ನಿರ್ದಿಷ್ಟಪಡಿಸಿದ ಸಮಯದೊಳಗೆ ಮಾಡಬೇಕೆಂದು ಅಗತ್ಯಪಡಿಸಿ ಆದೇಶ ಹೊರಡಿಸಬಹುದು, ಮತ್ತು ಅವಶ್ಯವಿದ್ದರೆ, ಅಂಥ ದುರಸ್ತಿಗಳು ಅಥವಾ ಬದಲಾವಣೆಗಳನ್ನು ಮಾಡುವವರೆಗೆ ಅಥವಾ ಅಂಥ ಸುರಕ್ಷಿತವಲ್ಲದ ಪರಿಸ್ಥಿತಿ ನಿವಾರಣೆಯಾಗುವವರೆಗೆ ಅಂಥ ಲಿಫ್ಟ್‌ನ ಬಳಕೆಯನ್ನು ನಿಲ್ಲಿಸುವಂತೆಯೂ ಆದೇಶಿಸಬಹುದು. ಮಾಲೀಕ ಅಥವಾ ಸಂದರ್ಭಾನುಸಾರ ಅವನ ಏಜೆಂಟನು, ಆ ನಂತರ, ಅದರಲ್ಲಿ ನಿರ್ದಿಷ್ಟಪಡಿಸಿರುವ ಅವಧಿಯೊಳಗಾಗಿ ಆದೇಶವನ್ನು ಪಾಲಿಸತಕ್ಕದ್ದು ಮತ್ತು ಹಾಗೆ ಪಾಲಿಸಿರುವುದಕ್ಕೆ ಅಧಿಕಾರಿಗೆ ಲಿಖಿತದಲ್ಲಿ ಕೂಡಲೇ ವರದಿ ಮಾಡತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ, ಅಧಿಕಾರಿಯ ಆದೇಶದಿಂದ ಬಾಧಿತನಾದ ಯಾವನೇ ವ್ಯಕ್ತಿಯು, ಅಂಥ ಅದೇಶದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಸರ್ಕಾರವು ಈ ಸಂಬಂಧದಲ್ಲಿ ನೇಮಕ ಮಾಡಿದ ಅಪೀಲು ಪ್ರಾಧಿಕಾರಕ್ಕೆ ಅಪೀಲು ಸಲ್ಲಿಸಬಹುದು.

(4) (3)ನೇ ಉಪಪ್ರಕರಣದ ಮೇರೆಗೆ ಯಾವುದೇ ಅಪೀಲನ್ನು ಸಲ್ಲಿಸಿದ್ದರೂ ಸಹ, (2)ನೇ ಉಪಪ್ರಕರಣದ ಮೇರೆಗೆ ಲಿಫ್ಟ್ ಬಳಸುವುದನ್ನು ನಿಲ್ಲಿಸುವಂತೆ ಅಧಿಕಾರಿಯು ಮಾಡಿದ ಯಾವುದೇ ಅದೇಶವನ್ನು, ಅಪೀಲು ಪ್ರಾಧಿಕಾರವು ಅಂಥ ಆದೇಶವನ್ನು ವಿಪರ್ಯಯಗೊಳಿಸಿದ ಹೊರತು ಅದನ್ನು ಪಾಲಿಸತಕ್ಕದ್ದು.

(5) (2)ನೇ ಉಪಪ್ರಕರಣದ ಮೇರೆಗೆ ಅಧಿಕಾರಿಯು ಮಾಡಿದ ಆದೇಶವು, ಅಪೀಲು ಪ್ರಾಧಿಕಾರಿಗೆ ಸಲ್ಲಿಸುವ ಅಪೀಲಿಗೆ ಒಳಪಟ್ಟಿರತಕ್ಕದ್ದು ಮತ್ತು ಅಪೀಲಿನಲ್ಲಿ ಅಪೀಲು ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರತಕ್ಕದ್ದು.

**9. ಮಾಲೀಕನು ಪರಿಶೀಲನೆಗಾಗಿ ಸೌಕರ್ಯಗಳನ್ನು ಒದಗಿಸುವುದು.–** ಯಾವ ಕಟ್ಟಡದಲ್ಲಿ ಲಿಫ್ಟ್‌ನ್ನು ಅಳವಡಿಸಲಾಗಿದೆಯೋ ಆ ಕಟ್ಟಡದ ಮಾಲೀಕನು ಅಥವಾ 10ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಲಾದ ಅವನ ಏಜೆಂಟನು 8ನೇ ಪ್ರಕರಣದ ಮೇರೆಗೆ ಲಿಫ್ಟ್ ಪರಿಶೀಲನೆ ಮಾಡುವ ಅಧಿಕಾರಿಗೆ ಎಲ್ಲ ಸೂಕ್ತ ಸೌಕರ್ಯಗಳನ್ನು ಒದಗಿಸತಕ್ಕದ್ದು ಮತ್ತು ಅಧಿಕಾರಿಯು ಹಾಗೆ ಮಾಡಬೇಕೆಂದು ಆದೇಶಿಸಿದಾಗಲೆಲ್ಲ, ಅವನು ತನ್ನ ಸ್ವಂತ ವೆಚ್ಚದಲ್ಲಿ, ಲಿಫ್ಟ್‌ನ ಅಳವಡಿಕೆ ಅಥವಾ ನಿರ್ವಹಣೆಗೆ ಯಾರೊಂದಿಗೆ ಅವನು ಒಪ್ಪಂದ ಮಾಡಿಕೊಂಡಿರುವನೋ ಆ ವ್ಯಕ್ತಿ ಯಾರಾದರೂ ಇದ್ದರೆ, ಅವನನ್ನು ಅಥವಾ ಲಿಫ್ಟನ್ನು ಪರಿಶೀಲಿಸುವಲ್ಲಿ ಅಧಿಕಾರಿಗೆ ಮಾರ್ಗದರ್ಶನ ನೀಡಲು ಸಕ್ಷಮನಾದಂಥ ವ್ಯಕ್ತಿಯ ಪ್ರತಿನಿಧಿಯನ್ನು ಅಂಥ ಪರಿಶೀಲನೆಯ ಸಮಯದಲ್ಲಿ ಹಾಜರಿರುವಂತೆ ಏರ್ಪಾಟು ಮಾಡತಕ್ಕದ್ದು.

**10. ಅಪಘಾತದ ವರದಿ.–** (1) ಯಾವುದೇ ಲಿಫ್ಟ್‌ನ ಕಾರ್ಯಾಚರಣೆಯಲ್ಲಿ ಯಾವುದೇ ಅಪಘಾತವುಂಟಾಗಿದ್ದರೆ, ಅಥವಾ ಅಪಘಾತವುಂಟಾಗುವ ಸಾಧ್ಯತೆ ಇದ್ದರೆ, ಯಾವನೇ ವ್ಯಕ್ತಿಗೆ ಗಾಯವುಂಟಾದರೆ, ಲಿಫ್ಟ್ ಕೆಲಸ ಮಾಡುತ್ತಿರುವ ಕಟ್ಟಡದ

ಮಾಲೀಕ ಅಥವಾ ಅಂಥ ಮಾಲೀಕನು, ಏಜೆಂಟನನ್ನು ನೇಮಕ ಮಾಡಿದ್ದರೆ ಅವನು ಹಾಗೂ (3)ನೇ ಉಪಪ್ರಕರಣದ ಮೇರೆಗೆ ಅವನ ಹೆಸರನ್ನು ಲಿಫ್ಟ್‌ಗಳ ತಪಾಸಣಾಧಿಕಾರಿಗೆ ತಿಳಿಸಿದ್ದರೆ, ಅಂಥ ಏಜೆಂಟನು, ಅಂಥ ಅಪಘಾತ ಸಂಭವಿಸಿದ ನಂತರ ಆದಷ್ಟು ಬೇಗನೆ, ಅಪಘಾತದ ಲಿಫ್ಟ್‌ಗಳ ತಪಾಸಣಾಧಿಕಾರಿಗೆ ಮತ್ತು ಬೆಂಗಳೂರು ನಗರ ಪೋಲೀಸ್ ಕಮೀಷನರಿಗೆ ಹಾಗೂ ಬೇರೆ ಸ್ಥಳದಲ್ಲಿ ಅಲ್ಲಿಯ ಜಿಲ್ಲಾ ದಂಡಾಧಿಕಾರಿಗೆ ಅಥವಾ ಸರ್ಕಾರವು ಆದೇಶದ ಮೂಲಕ ನಿರ್ದಿಷ್ಟಪಡಿಸುವಂಥ ಅಧಿಕಾರಿಗೆ ಪೂರ್ಣ ವಿವರಗಳ ಸಹಿತ ನೋಟೀಸನ್ನು ನೀಡತಕ್ಕದ್ದು ಮತ್ತು ಲಿಫ್ಟ್ ಸ್ಥಾಪನೆಗೆ ಸಂಬಂಧಿಸಿದಂತೆ ಯಾವ ರೀತಿಯಲ್ಲಿಯೂ ಮಧ್ಯಪ್ರವೇಶಿಸತಕ್ಕದ್ದಲ್ಲ ಮತ್ತು ಅಂಥ ಲಿಫ್ಟ್ ಈ ಸಂಬಂಧದಲ್ಲಿ ಸರ್ಕಾರವು ಅಧಿಕೃತಗೊಳಿಸಿದ ಅಧಿಕಾರಿಯ ಲಿಖಿತ ಅನುಮತಿಯ ಹೊರತಾಗಿ ಪುನರ್ ಕಾರ್ಯಾರಂಭ ಮಾಡತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ಲಿಫ್ಟ್ ಅಳವಡಿಸಲಾಗಿರುವ ಪ್ರತಿಯೊಂದು ಕಟ್ಟಡದ ಮಾಲೀಕನು ಮತ್ತು ಅಂಥ ಮಾಲೀಕನು ಅಂಥ ಕಟ್ಟಡದಲ್ಲಿ ವಾಸವಾಗಿಲ್ಲದಿದ್ದರೆ, ಲಿಫ್ಟ್ ಕಾರ್ಯಾಚರಣೆಯಲ್ಲಿ ಯಾವುದೇ ಅಪಘಾತ ಸಂಭವಿಸಿದರೆ, ಅದರ ಬಗ್ಗೆ ತಿಳಿವಳಿಕೆ ಪತ್ರ ಕೊಡಲು ಕಟ್ಟಡವು ಇರುವ ಪಟ್ಟಣ ಅಥವಾ ಗ್ರಾಮದಲ್ಲಿ ವಾಸವಾಗಿರುವ ಒಬ್ಬ ಏಜೆಂಟನನ್ನು ನೇಮಕ ಮಾಡತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗೆ ನೇಮಕ ಮಾಡಲಾದ ಪ್ರತಿಯೊಬ್ಬ ಏಜೆಂಟನ ಹೆಸರನ್ನು ಲಿಫ್ಟ್ ತಪಾಸಣಾಧಿಕಾರಿಗೆ ತಿಳಿಸತಕ್ಕದ್ದು.

**11. ಸರ್ಕಾರದ ಅಧಿಕಾರಗಳ ಪ್ರತ್ಯಾಯೋಜನೆ.–** ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ತನಗೆ ಪ್ರದತ್ತವಾದ ಯಾವುದೇ ಅಧಿಕಾರಗಳನ್ನು (14ನೇ ಪ್ರಕರಣದ ಅಡಿಯಲ್ಲಿ ನಿಯಮಗಳನ್ನು ರಚಿಸುವ ಅಧಿಕಾರದ ಹೊರತು) ಅದು ಸೂಕ್ತವೆಂದು ಭಾವಿಸುವಂಥ ಅಧಿಕಾರಿಗೆ, ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಷರತ್ತುಗಳಿಗೊಳಪಟ್ಟು ಪ್ರತ್ಯಾಯೋಜಿಸಬಹುದು.

**12. ಲಿಫ್ಟ್‌ಗಳ ತಪಾಸಣೆ.–** ಸರ್ಕಾರದಿಂದ ಈ ಸಂಬಂಧದಲ್ಲಿ ಅಧಿಕೃತಗೊಳಿಸಿದ ಅಧಿಕಾರಿಯು, ಪ್ರತಿಯೊಂದು ಲಿಫ್ಟ್‌ನ್ನು ಕನಿಷ್ಠ ಮೂರು ತಿಂಗಳಿಗೊಮ್ಮೆ ತಪಾಸಣೆ ಮಾಡತಕ್ಕದ್ದು. ಅಂಥ ತಪಾಸಣೆಗೆ ವಾರ್ಷಿಕ [1][ಒಂದು ನೂರು][1] ರೂಪಾಯಿಗಳ ವಾರ್ಷಿಕ ಫೀಜನ್ನು ವಿಧಿಸತಕ್ಕದ್ದು ಮತ್ತು ಅಂಥ ಫೀಜು ಮೋಟಾರು ಪರಿಶೀಲನೆಯ ವೆಚ್ಚಗಳನ್ನೂ ಸಹ ಒಳಗೊಳ್ಳತಕ್ಕದ್ದು.

1. 1993ರ ಅಧಿನಿಯಮ 22ರ ಮೂಲಕ 26.05.1993 ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.

**13. ಫೀಜುಗಳ ವಸೂಲಿ.–** ಈ ಅಧಿನಿಯಮದ ಅಡಿಯಲ್ಲಿ ಫೀಜುಗಳೆಂದು ಸಂದಾಯ ಮಾಡಲಾಗುವ ಎಲ್ಲ ಮೊತ್ತವನ್ನು ಭೂ ಕಂದಾಯದ ಬಾಕಿಗಳಂತೆ ವಸೂಲಿ ಮಾಡತಕ್ಕದ್ದು.

**14. ನಿಯಮಗಳನ್ನು ರಚಿಸಲು ಅಧಿಕಾರ.–** (1) ಸರ್ಕಾರವು, ಪೂರ್ವಪ್ರಕಟಣೆಯ ತರುವಾಯ, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು ನಿಯಮಗಳನ್ನು ರಚಿಸಬಹುದು.

(2) ನಿರ್ದಿಷ್ಟವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ ಈ ಎಲ್ಲ ಅಥವಾ ಯಾವುದೇ ವಿಷಯಗಳಿಗಾಗಿ ಅಂಥ ನಿಯಮಗಳನ್ನು ರಚಿಸಬಹುದು ಎಂದರೆ:–

(ಎ) ಲಿಫ್ಟ್‌ಗಳ ತಪಶೀಲು ಪಟ್ಟಿ;

(ಬಿ) ಲಿಫ್ಟ್‌ಗಳ ಸ್ಥಾಪನೆಯ ಯೋಜನೆಗಳನ್ನು ಸಲ್ಲಿಸತಕ್ಕ ರೀತಿ;

(ಸಿ) ಲಿಫ್ಟ್‌ಗಳನ್ನು ಪರೀಕ್ಷಿಸುವ ರೀತಿ;

(ಡಿ) ಲಿಫ್ಟ್‌ನ ಸ್ಥಾಪನೆಗೆ ಅಥವಾ ಅದು ಕಾರ್ಯನಿರ್ವಹಿಸಲು ಲೈಸೆನ್ಸ್‌ಗಾಗಿ ಅರ್ಜಿ ನಮೂನೆ;

(ಇ) 6ನೇ ಪ್ರಕರಣದ ಮೇರೆಗೆ ಲಿಫ್ಟ್ ಕಾರ್ಯನಿರ್ವಹಿಸಲು ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಮತ್ತು ಯಾವ ನಮೂನೆಯಲ್ಲಿ ಲೈಸೆನ್ಸ್‌ಗಳನ್ನು ಮಂಜೂರು ಮಾಡಬಹುದೋ ಆ ನಿಬಂಧನೆಗಳು ಮತ್ತು ಷರತ್ತುಗಳು ಮತ್ತು ಆ ನಮೂನೆ;

(ಎಫ್) 6ನೇ ಪ್ರಕರಣದ ಮೇರೆಗೆ ಯಾವ ರೀತಿಯಲ್ಲಿ ಮತ್ತು ಯಾವ ನಿಬಂಧನೆಗಳಿಗೊಳಪಟ್ಟು ಲಿಫ್ಟ್ ಕಾರ್ಯನಿರ್ವಹಿಸಬೇಕೋ ಆ ರೀತಿ ಮತ್ತು ಆ ನಿಬಂಧನೆಗಳು;

(ಜಿ) ಯಾವ ರೀತಿಯಲ್ಲಿ ಅಪಘಾತಗಳ ತಿಳಿವಳಿಕೆ ಪತ್ರವನ್ನು ನೀಡಬೇಕೋ ಆ ರೀತಿ ಮತ್ತು ಅಂಥ ನಮೂನೆ; ಮತ್ತು

(ಎಚ್) 8ನೇ ಪ್ರಕರಣದ ಮೇರೆಗೆ ನೀಡಬೇಕಾದ ತಿಳಿವಳಿಕೆ ಪತ್ರದ ನಮೂನೆ.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲವು ಅಧಿವೇಶನದಲ್ಲಿರುವಾಗ ಅದರ ಪ್ರತಿಯೊಂದು ಸದನದ ಮುಂದೆ, ಒಂದು ಅಧಿವೇಶನದಲ್ಲಿ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನ ಅಥವಾ ಒಂದಾದಮೇಲೊಂದರಂತೆ ಅನುಕ್ರಮವಾಗಿಬರುವ ಅಧಿವೇಶನಗಳ ನಿಕಟೋತ್ತರ ಅಧಿವೇಶನವು ಮುಕ್ತಾಯವಾಗುವ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಆ ಮಾರ್ಪಾಟನ್ನು ಅಥವಾ ರದ್ದಿಯಾತಿಯನ್ನು ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚಿಸಿದ ದಿನಾಂಕದಿಂದ ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಅಂಥ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧೆಯನ್ನುಂಟುಮಾಡತಕ್ಕದ್ದಲ್ಲ.

**15. ದಂಡ.–** ಈ ಅಧಿನಿಯಮದ, ನಿಯಮಗಳ ಯಾವುದೇ ಉಪಬಂಧಗಳನ್ನು ಅಥವಾ ಲೈಸೆನ್ಸಿನ ಷರತ್ತುಗಳನ್ನು ಅಥವಾ ಈ ಅಧಿನಿಯಮ ಅಥವಾ ನಿಯಮಗಳ ಮೇರೆಗೆ ಲಿಫ್ಟ್ ಗಳ ತಪಾಸಣಾ ಅಧಿಕಾರಿ ನೀಡಿದ ನಿರ್ದೇಶನಗಳನ್ನು ಉಲ್ಲಂಘಿಸುವ ಯಾರೇ ಆಗಲಿ, ಅಪರಾಧ ನಿರ್ಣಯದ ನಂತರ, ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಮತ್ತು ಅದಕ್ಕೆ ತಪ್ಪಿದರೆ ಒಂದು ತಿಂಗಳವರೆಗೆ ವಿಸ್ತರಿಸಬಹುದಾದಂಥ ಸಾದಾ ಕಾರಾವಾಸದಿಂದ ಹಾಗೂ ಮುಂದುವರಿದ ಉಲ್ಲಂಘನೆಯ ಸಂದರ್ಭದಲ್ಲಿ ಅಪರಾಧ ನಿರ್ಣಯದ ತರುವಾಯ, ಮುಂದುವರಿದ ಅಂಥ ಮೊದಲ ಉಲ್ಲಂಘನೆಗಾಗಿ ಅಂಥ ಉಲ್ಲಂಘನೆಯ ಅವಧಿಯಲ್ಲಿ ಪ್ರತಿ ದಿವಸಕ್ಕೆ ಐವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಹೆಚ್ಚುವರಿ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**16. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಮಾಡಿದ ವ್ಯಕ್ತಿಯು ಕಂಪನಿಯಾಗಿದ್ದರೆ, ಅಪರಾಧವು ನಡೆದ ಕಾಲದಲ್ಲಿ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಅದರ ವ್ಯವಹಾರವನ್ನು ನಡೆಸಲು ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಆ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವನು ತನ್ನ ವಿರುದ್ಧದ ವ್ಯವಹರಣೆಗೆ ಗುರಿಯಾಗತಕ್ಕದ್ದು:

ಪರಂತು, ಅಂಥ ಯಾವನೇ ವ್ಯಕ್ತಿಯು ಆ ಅಪರಾಧವು ತನ್ನ ತಿಳಿವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ಸಂಭವಿಸುವುದನ್ನು ತಡೆಗಟ್ಟಲು ತಾನು ಎಲ್ಲ ಯುಕ್ತ ಜಾಗರೂಕತೆಯನ್ನು ವಹಿಸಿದ್ದೆನೆಂದು ರುಜುವಾತುಪಡಿಸಿದರೆ,

ಈ ಉಪಪ್ರಕರಣದಲ್ಲಿ ಒಳಗೊಂಡಿರುವ ಯಾವುದೂ, ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿದ್ದರೆ ಮತ್ತು ಅಪರಾಧವು ಆ ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ನಡೆಯಿತೆಂದು ರುಜುವಾತಾದಲ್ಲಿ ಅಥವಾ ಅವನ ನಿರ್ಲಕ್ಷತೆಯಿಂದ ನಡೆಯಿತೆಂದು ಆರೋಪಿಸಬಹುದಾಗಿರುವಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯು ತದನುಸಾರವಾಗಿ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.**– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) 'ಕಂಪನಿ' ಎಂದರೆ, ಒಂದು ನಿಗಮಿತ ನಿಕಾಯ ಮತ್ತು ಇದು ಒಂದು ಫರ್ಮ್‌ನ್ನು ಅಥವಾ ವ್ಯಕ್ತಿಗಳ ಇತರ ಸಂಘವನ್ನು ಒಳಗೊಳ್ಳುತ್ತದೆ; ಮತ್ತು

(ಬಿ) ಒಂದು ಫರ್ಮಿಗೆ ಸಂಬಂಧಿಸಿದಂತೆ 'ನಿರ್ದೇಶಕ' ಎಂದರೆ, ಆ ಫರ್ಮಿನ ಒಬ್ಬ ಪಾಲುದಾರ.

**17. ಪ್ರಾಸಿಕ್ಯೂಷನ್‌ಗಾಗಿ ಮಂಜೂರಾತಿ.**– ಈ ಅಧಿನಿಯಮದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧಕ್ಕೆ ಸರ್ಕಾರದ ಪೂರ್ವ ಮಂಜುರಾತಿಯ ಹೊರತು ಯಾವುದೇ ಪ್ರಾಸಿಕ್ಯೂಷನ್ ಕೈಗೊಳ್ಳತಕ್ಕದ್ದಲ್ಲ.

**18. ನೋಟೀಸುಗಳ, ಆದೇಶಗಳ ಅಥವಾ ದಸ್ತಾವೇಜುಗಳ ಜಾರಿ.**– (1) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಯಾವನೇ ವ್ಯಕ್ತಿಗೆ ಕಳುಹಿಸಬೇಕೆಂದು ಅಗತ್ಯಪಡಿಸಿದ ಅಥವಾ ಅಧಿಕೃತಗೊಳಿಸಿದ ಪ್ರತಿಯೊಂದು ನೋಟೀಸು, ಆದೇಶ ಅಥವಾ ದಸ್ತಾವೇಜುಗಳನ್ನು ಆ ಯಾವನೇ ವ್ಯಕ್ತಿಗೆ ಅಂಚೆಯ ಮೂಲಕ ಜಾರಿಗೊಳಿಸಬಹುದು ಅಥವಾ,–

(ಎ) ವಿಳಾಸದಾರನು ಸರ್ಕಾರವಾಗಿದ್ದಲ್ಲಿ 10ನೇ ಪ್ರಕರಣದ (2)ನೇ ಉಪ ಪ್ರಕರಣದ ಮೇರೆಗೆ ನೇಮಕ ಮಾಡಲಾದ ಏಜೆಂಟನ ಕಚೇರಿಯಲ್ಲಿ;

(ಬಿ) ವಿಳಾಸದಾರನು ಸ್ಥಳೀಯ ಪ್ರಾಧಿಕಾರವಾಗಿದ್ದಲ್ಲಿ ಸ್ಥಳೀಯ ಪ್ರಾಧಿಕಾರದ ಕಚೇರಿಯಲ್ಲಿ;

(ಸಿ) ವಿಳಾಸದಾರನು ಕಂಪನಿಯಾಗಿದ್ದಲ್ಲಿ, ಕಂಪನಿಯ ನೋಂದಾಯಿತ ಕಚೇರಿಯಲ್ಲಿ, ಅಥವಾ ಕಂಪನಿಯ ನೋಂದಾಯಿತ ಕಚೇರಿ ಭಾರತದಲ್ಲಿಲ್ಲದ ಸಂದರ್ಭದಲ್ಲಿ ಭಾರತದಲ್ಲಿನ ಕಂಪನಿಯ ಮುಖ್ಯ ಕಚೇರಿಯಲ್ಲಿ;

(ಡಿ) ವಿಳಾಸದಾರನು ಯಾವನೇ ಇತರ ವ್ಯಕ್ತಿಯಾಗಿದ್ದಲ್ಲಿ, ಆ ವ್ಯಕ್ತಿಯ ಸಾಮಾನ್ಯ ಅಥವಾ ಕೊನೆಯದಾಗಿ ತಿಳಿದ ವಾಸದ ಅಥವಾ ವ್ಯವಹಾರದ ಸ್ಥಳದಲ್ಲಿ

– ತಲುಪಿಸಬಹುದು.

(2) ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಯಾವುದೇ ಆವರಣಗಳ ಮಾಲೀಕನಿಗೆ ಅಥವಾ ಮಾಲೀಕನ ಏಜೆಂಟನಿಗೆ ಅಥವಾ ಅಧಿಭೋಗದಾರನಿಗೆ ಕಳುಹಿಸಲು ಅಗತ್ಯಪಡಿಸಿದ ಅಥವಾ ಅಧಿಕೃತಗೊಳಿಸಿದ ಪ್ರತಿಯೊಂದು ನೋಟೀಸು, ಆದೇಶ ಅಥವಾ ದಸ್ತಾವೇಜನ್ನು 'ಮಾಲೀಕನ' ಅಥವಾ 'ಮಾಲೀಕನ ಏಜೆಂಟನ' ಅಥವಾ 'ಆವರಣಗಳ ಅಧಿಭೋಗದಾರನ' (ಆವರಣಗಳನ್ನು ಹೆಸರಿಸುವ) ವಿವರಣೆ ಸಹಿತ ಕಳುಹಿಸಿದ್ದರೆ ಅದನ್ನು ಸರಿಯಾದ ವಿಳಾಸಕ್ಕೆ ಕಳುಹಿಸಲಾಗಿದೆ ಎಂಬುದಾಗಿ ಭಾವಿಸತಕ್ಕದ್ದು ಮತ್ತು ಅದನ್ನು ಅಥವಾ ಅದರ ನಕಲು ಪ್ರತಿಯನ್ನು ಆವರಣಗಳಲ್ಲಿನ ಯಾರಾದರೂ ವ್ಯಕ್ತಿಗೆ ತಲುಪಿಸುವ ಮೂಲಕ ಅಥವಾ ಆವರಣದಲ್ಲಿ ಯಾವ ವ್ಯಕ್ತಿಯೂ ಇರದಿದ್ದರೆ ಅದನ್ನು ಯುಕ್ತ ಎಚ್ಚರಿಕೆಯಿಂದ ಆವರಣದ ಯಾವುದಾದರೂ ಎದ್ದುಕಾಣುವ ಸ್ಥಳದಲ್ಲಿ ಅಂಟಿಸುವ ಮೂಲಕ ಜಾರಿ ಮಾಡಬಹುದು.

**19. ಸದ್ಭಾವನೆಯಿಂದ ಮಾಡಲಾದ ಕೃತ್ಯಗಳಿಗೆ ರಕ್ಷಣೆ.–** ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸದ್ಭಾವನೆಯಿಂದ ಮಾಡಲಾದ ಅಥವಾ ಮಾಡಲು ಉದ್ದೇಶಿಸಲಾದ ಯಾವುದೇ ಕಾರ್ಯಕ್ಕೆ ಯಾವನೇ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ಕ್ರಮಗಳನ್ನು ಜರುಗಿಸತಕ್ಕದ್ದಲ್ಲ.

**20. ಉಳಿಸುವಿಕೆ.–** ಈ ಅಧಿನಿಯಮದಲ್ಲಿರುವುದು ಯಾವುದೂ, 1910ರ ಭಾರತೀಯ ವಿದ್ಯುಚ್ಛಕ್ತಿ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುವೇ ನಿಯಮಗಳ ಉಪಬಂಧಗಳಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

**21. ನಿರಸನ.–** ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಂದು, ಬೆಳಗಾಂ ಪ್ರದೇಶದಲ್ಲಿ ಜಾರಿಯಲ್ಲಿದ್ದ ಬಾಂಬೆ ಲಿಫ್ಟ್ ಅಧಿನಿಯಮ, 1939 (1939ರ ಬಾಂಬೆ ಅಧಿನಿಯಮ 10) ನಿರಸನಗೊಳ್ಳತಕ್ಕದ್ದು:

ಪರಂತು, 1899ರ [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮದ 8 ಮತ್ತು 24ನೇ ಪ್ರಕರಣಗಳು ಸದರಿ ಅಧಿನಿಯಮಿತಿಯು ನಿರಸನಗೊಂಡು ಮತ್ತು ಈ ಅಧಿನಿಯಮದ ಮೂಲಕ ಪುನರ್ ಅಧಿನಿಯಮಿತಿಗೊಂಡಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶ, 1973ರ ಮೂಲಕ 01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**ಅಧಿಸೂಚನೆ**

**ಬೆಂಗಳೂರು, ದಿನಾಂಕ 16ನೇ ಜುಲೈ 1976**

**(ಸಂ. ಪಿಡಬ್ಲ್ಯೂಡಿ 143 ಇಐಜಿ 74)**

**ಎಸ್.ಓ.1843:–** ಕರ್ನಾಟಕ ಲಿಫ್ಟ್‌ಗಳ ಅಧಿನಿಯಮ, 1974ರ (1974ರ ಕರ್ನಾಟಕ ಅಧಿನಿಯಮ ಸಂಖ್ಯೆ 24) 1ನೇ ಪ್ರಕರಣದ (3)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು 1ನೇ ಆಗಸ್ಟ್ 1976ನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಭೀಮರಾವ್**
ಸರ್ಕಾರದ ಉಪ ಕಾರ್ಯದರ್ಶಿ,
ಪಿ.ಡಬ್ಲ್ಯೂಡಿ ಮತ್ತು ವಿದ್ಯುಚ್ಛಕ್ತಿ ಇಲಾಖೆ.

(20.7.1976 ನೇ ದಿನಾಂಕದ ಕರ್ನಾಟಕ ರಾಜ್ಯಪತ್ರದ (ವಿಶೇಷ ಸಂಚಿಕೆ) ಭಾಗ IV– 2ಸಿ (ii)ರ ಸಂ 3495 ಎಂದು ಪ್ರಕಟವಾಗಿದೆ.)

The above translation of the Karnataka Lifts Act, 1974 (24 of 1974) shall be authoritative text in the Kannada Language under section 5A of the Karnataka Official Language Act, 1963.

Governor of Karnataka
ಭಾರತದ ರಾಷ್ಟ್ರಪತಿಯವರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**ಜಿ.ಕೆ. ಬೋರೇಗೌಡ**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ.